Ref.No. 2/2025

WW–1,

ದಿನಾಂಕಃ 14–08–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ–2 ನೇ ಪಾರ್ಟಿ ಪರವಾಗಿಃ ಶ್ರೀ. ಬಿ ಎಲ್ ಜಿ ವಕೀಲರಿಂದ ಃ

ನಾನು 2 ನೇ ಪಾರ್ಟಿ ಸಂಸ್ಥೆಯ ಖಾಯಂ ನೌಕರನಾಗಿರುವುದಿಲ್ಲ ಎಂದರೆ ಸರಿ . ನಾನು 1 ನೇ ಪಾರ್ಟಿ ಯೂನಿಯನ್ ನ ಪ್ರಧಾನ ಕಾರ್ಯದರ್ಶಿ ಆಗಿದ್ದರಿಂದ ನಾನು ಈ ಪ್ರಕರಣದಲ್ಲಿ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ. ನಾನೇ 1 ನೇ ಪಾರ್ಟಿ ಯೂನಿಯನ್ ಪ್ರಧಾನ ಕಾರ್ಯದರ್ಶಿ ಯಾಗಿದ್ದರಿಂದ ಹಾಗೂ ಈ ಪ್ರಕರಣದಲ್ಲಿ 1 ನೇ ಪಕ್ಷ ಯೂನಿಯನ್ ಅನ್ನು ಪ್ರತಿನಿಧಿಸುತ್ತಿರುವುದರಿಂದ 1 ನೇ ಪಕ್ಷ ಸಂಘವು ನನಗೆ ಯಾವುದೇ ಅಧಿಕಾರ ಪತ್ರವನ್ನು ನೀಡಿ ನಿರ್ಣಯವನ್ನು ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ . ನಾನು 2 ನೇ ಪಾರ್ಟಿ ಸಂಸ್ಥೆಯ ಖಾಯಂ ನೌಕರನಲ್ಲದೇ ಇದ್ದುದರಿಂದ ಸಂಘವು ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿತ್ತು ಎಂದರೆ ಸರಿಯಲ್ಲ . ಈ ಪ್ರಕರಣವು charter of demands ಗೆ ಸಂಬಂಧಿಸಿದ್ದಾಗಿರುತ್ತದೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆಯು 1975 ರಲ್ಲಿ ಸ್ಥಾಪನೆಯಾಗಿರುತ್ತದೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆಯು 1989 ರಲ್ಲಿ ಮುಚ್ಚಿರುತ್ತದೆ ಎಂದರೆ ಸರಿಯಲ್ಲ . 1 ನೇ ಪಾರ್ಟಿ ಸಂಘವು ಯಾವ ವರ್ಷದಲ್ಲಿ ಸ್ಥಾಪನೆ ಯಾಗಿರುತ್ತದೆ ಎಂದು ನನಗೆ ನಿಖರವಾಗಿ ನೆನಪಿಲ್ಲ. 1975 ರಿಂದ 1989 ರ ವರೆಗೆ 1 ನೇ ಪಾರ್ಟಿ ಸಂಘವು ಸ್ಥಾಪನೆಯಾಗಿರುವುದಿಲ್ಲ ಎಂದರೆ ಸರಿ . 1989 ರಲ್ಲಿ ಮುಚ್ಚಿದಂತಹ 2 ನೇ ಪಾರ್ಟಿ ಸಂಸ್ಥೆ ಯನ್ನು ಈಗಿನ Managing Director ರವರು ಅದೇ ವರ್ಷ 2 ನೇ ಪಾರ್ಟಿ ಸಂಸ್ಥೆಯ Assets and Liability ಅನ್ನು ಪಡೆದುಕೊಂಡು ಮುಚ್ಚಲಾದ ಸಂಸ್ಥೆ ಯನ್ನಲು 1990 ರಲ್ಲಿ ಪುನಃ ಪ್ರಾರಂಭಿಸಿರುತ್ತಾರೆ ಎಂಬ ಸೂಚನೆಗೆ ಸಾಕ್ಷಿದಾರರ 1 ನೇ ಪಾರ್ಟಿ ಯೂನಿಯನ್ ಸ್ಥಾಪನೆಯ ಪೂರ್ವದ ಸಂಗತಿಗಳು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ . 1990 ರಲ್ಲಿ 2 ನೇ ಪಾರ್ಟಿ ಸಂಸ್ಥೆ ಯ ಪುನಃ ಪ್ರಾರಂಭವಾದಾಗ ಹಳೆಯ ನೌಕರರನ್ನು ತೆಗೆದು ಹಾಕದೇ ಸಂಸ್ಥೆಯ ಯಂತ್ರಗಳನ್ನು ಆಧುನೀಕರಣ ಗೊಳಿಸಿ ನಡೆಸಿಕೊಂಡು ಬಂದಿರುತ್ತಾರೆ ಎಂದರೆ ಸರಿ .

2007 ರಲ್ಲಿ 1 ನೇ ಪಾರ್ಟಿ ಯೂನಿಯನ್ ಸ್ಥಾಪನೆಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದಕ್ಕಿಂತ ಮೊದಲೇ ಸ್ಥಾಪನೆಯಾಗಿರುತ್ತದೆ ಎಂದು ನುಡಿಯುತ್ತಾರೆ . ಹಲವಾರು charter of demands ನಡೆದು ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ . ಈ ಹಿಂದಿನ charter of demands 30.04.2022 ಕ್ಕೆ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ . ಸದರಿ charter of demands 01.05.2018 ರಿಂದ 30.04.2022 ರವರೆಗೆ ಚಾಲ್ತಿಯಲ್ಲಿದ್ದು ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ .

ದಿ 02.03.2022 ರಂದು ನಾವು ನಿ ಡಬ್ಲೂ -5 ರಂತೆ ಆಡಳಿತ ವರ್ಗಗೆ ಪತ್ರವನ್ನು ಬರೆದು ಸದರಿ charter of demands ಅನ್ನು terminate ಮಾಡುತ್ತಿದ್ದೇವೆ ಎಂದು ತಿಳಿಸಿರುತ್ತೇವೆ ಎಂದರೆ ಸರಿ . ಸದರಿ ಅಂಶವನ್ನು ಆಡಳಿತ ವರ್ಗ ದವರೂ ಕೂಡ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿ. ನಂತರ ಆಡಳಿತ ವರ್ಗ ದವರು ನಿ ಡಬ್ಲೂ -6 ರಂತೆ ಪತ್ರವನ್ನು ಬರೆದು ಕಾರ್ಖಾನೆಯ ಆರ್ಥಿಕ ಸ್ಥಿತಿಯ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿ . ಸದರಿ ಪತ್ರದಲ್ಲಿ 2020-21 ಮತ್ತು 2021-22 ರಂದು ಕೋವಿಡ್ ನಿಂದಾಗಿ ಸಂಸ್ಥೆಗೆ ಬಹಳ ಆರ್ಥಿಕ ನಷ್ಟ ಉಂಟಾಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ . ಸದರಿ ಪತ್ರದಲ್ಲಿ 2 ನೇ ಪಾರ್ಟಿ ಸಂಸ್ಥೆಯಲ್ಲದೆ ಸದರಿ ಸಂಸ್ಥೆಯ ಅಕ್ಕಪಕ್ಕದಲ್ಲಿ ಸ್ಥಾಪಿಸಿದ ಬೇರೆ ಸಂಸ್ಥೆಗಳಿಗೂ ಆರ್ಥಿಕ ನಷ್ಟ ಉಂಟಾಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆಯಲ್ಲಿ ಕ್ರಾಪ್ಟ್ ಪೇಪರ್ ಗಳನ್ನು ಉತ್ಪಾದಿಸಲಾಗುತ್ತದೆ ಎಂದರೆ ಸರಿ . ಸದರಿ ಕ್ರಾಪ್ಟ್ ಪೇಪರ್ ಗಳನ್ನು ವೇಸ್ಟ್ ಪೇಪರ್ ನ್ನು recycle ಮಾಡಿ ತಯಾರಿಸಲಾಗುತ್ತದೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಕ್ರಾಪ್ಟ್ ವುಡ್ ಮತ್ತು ಇತರೆ ವಸ್ತುಗಳಿಂದ ತಯಾರಿಸಲಾಗುತ್ತದೆ ಎಂದು ನುಡಿಯುತ್ತಾರೆ . ಕ್ರಾಪ್ಟ್ ವುಡ್ ಮತ್ತು ಇತರೆ ವಸ್ತುಗಳಿಂದ ತಯಾರಿಸಲಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .2 ನೇ ಪಾರ್ಟಿಯವರು ನೀಡಿದ್ದಂತಹ ಪತ್ರದಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿ ಕ್ರಾಪ್ಟ್ ಪೇಪರ್ ಅನ್ನು ಉತ್ಪಾದಿಸುವ ಹಲವಾರು ಸಂಸ್ಥೆ ಗಳು ಕರ್ನಾಟಕ ಮತ್ತು ಸುತ್ತಮುತ್ತಲಿನ ರಾಜ್ಯಗಳಲ್ಲಿ ಸ್ಥಾಪನೆಯಾಗಿರುತ್ತವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ . ಪತ್ರದಲ್ಲಿ ತಿಳಿಸಿದಂತಹ ಮೇಲಿನ ಅಂಶಗಳಿಂದಾಗಿ 2 ನೇ ಪಾರ್ಟಿ ಸಂಸ್ಥೆ ಗೆ 2020-21, 2021-22 ಸಾಲಿನಲ್ಲಿ ಬಹಳಷ್ಟು ಆರ್ಥಿಕ ನಷ್ಟ ಉಂಟಾಗಿರುತ್ತದೆ ಎಂದು ದಾಖಲಾತಿಗಳನ್ನೂ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ . 2 ನೇ ಪಾರ್ಟಿ ಸಂಸ್ಥೆಯು ಆರ್ಥಿಕ ನಷ್ಟದಲ್ಲಿ ಇದ್ದರೂ ಸಹ ದಿನಾಂಕ 01.05.2018 ರಿಂದ 30.04.2022 ರವರೆಗಿನ ಎಲ್ಲಾ ಹಣವನ್ನು Memorandum of settlement ಪ್ರಕಾರ ಸಂಪೂರ್ಣಾಗಿ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ . 2020 ರ ಕೋವಿಡ್ ಲಾಕ್ ಡೌನ್ ಸಂದರ್ಭ ದಲ್ಲಿ 43 ದಿನಗಳ ಅವಧಿಯ ಪೂರ್ಣ ಸೌಲಭ್ಯ ಗಳನ್ನು 2 ನೇ ಪಾರ್ಟಿ ಸಂಸ್ಥೆ ಯು ಪೂರ್ಣ ಪ್ರಮಾಣದಲ್ಲಿ ನೀಡಿರುವುದಿಲ್ಲ . ಸದರಿ ಅವಧಿಯಲ್ಲಿ 2 ನೇ ಪಾರ್ಟಿ ಸಂಸ್ಥೆ ಯ ಅಕ್ಕಪಕ್ಕದಲ್ಲಿ ಇರುವಂತಹ ಸಂಸ್ಥೆ ಯಲ್ಲಿಯೂ ಪೂರ್ಣ ಪ್ರಮಾಣದಲ್ಲಿ ಸೌಲಭ್ಯ ಗಳನ್ನು ನೌಕರರಿಗೆ ನೀಡಲಾಗಿರುವುದಿಲ್ಲ ಎಂದರೆ ಸರಿಯಲ್ಲ . 2 ನೇ ಪಾರ್ಟಿ ಸಂಸ್ಥೆ ಯ ಆರ್ಥಿಕ ಸ್ಥಿತಿಯ ಬಗ್ಗೆ ತಿಳಿದಿದ್ದರೂ ಸಹ ನಿ ಡಬ್ಲ್ಯೂ -7 ರಂತೆ ಒಂದು ಪತ್ರವನ್ನು ಬರೆದು charter of demands ನ ಪ್ರಕಾರ ಸೌಲಭ್ಯಗಳನ್ನು ನೀಡಿವಂತೆ ಒತ್ತಾಯಿಸಿರುತ್ತೇವೆ ಎಂದರೆ ಸರಿ .ನಿ ಡಬ್ಲ್ಯೂ -7 ರಲ್ಲಿ charter of demands ದಿ 30.04.2022 ರಲ್ಲಿ ಚಾಲ್ತಿಯಲ್ಲಿದ್ದು ಅದರಲ್ಲಿ ನಮೂದಿಸಿರುವ ಸೌಲಭ್ಯಗಳನ್ನು ಮತ್ತೊಂದು charter of demands ಚಾಲ್ತೆಗೆ ಬರುವ ವರೆಗೂ ನೀಡಬೇಕು ಎಂದು Memorandum of settlement ನಲ್ಲಿ ಇರುತ್ತದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ .

ಸದರಿ Memorandum of settlement ನ Clause No. 28 B ಯಲ್ಲಿ ಸದರಿ ಷರತ್ತು ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ . ಸದರಿ Memorandum of settlement ನ Clause No. 28 B ಯಲ್ಲಿ ಸದರಿ ಷರತ್ತು ನಾನು ಹೇಳಿದಂತೆ ನಮೂದಾಗಿರುವುದಿಲ್ಲ ಆದುದರಿಂದ charter of demands ನ್ನು 30.04.2022 ರ ನಂತರವೂ ಕೂಡಾ ಮುಂದುವರೆಯಲೇ ಬೇಕು ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ನಂತರ ಸಂಸ್ಥೆ ಯ ಆರ್ಥಿಕ ಸ್ಥಿತಿಯ ಬಗ್ಗೆ ತಿಳಿದಿದ್ದರೂ ಸಹ ಹೊಸ charter of demands ಪ್ರಕಾರ ಪ್ರತಿ ನೌಕರನಿಗೆ ಪ್ರತಿ ತಿಂಗಳು ರೂ. 15,000/- ಹೆಚ್ಚಳ ಹಣವನ್ನು ಕೊಡಲೇಬೇಕು ಎಂದು ತಿಳಿಸಿರುತ್ತೇವೆ ಎಂಬ ಸೂಚನೆಗೆ ಸಾಕ್ಷಿದಾರರ ಸಂಸ್ಥೆ ಯು ಆರ್ಥಿಕ ನಷ್ಟದಲ್ಲಿ ಇರುವುದಿಲ್ಲ ಆದುದರಿಂದ ಹೆಚ್ಚಿನ ಹಣವನ್ನು ನೀಡುವಂತೆ ಕೇಳಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ . ಸಾಕ್ಷಿಯು ಮುಂದುವರೆದು ಹಣದುಬ್ಬರದ ಆಧಾರದ ಮೇರೆಗೆ ಹೆಚ್ಚುವರಿ ಹಣವನ್ನು ನೀಡುವಂತೆ ಕೇಳಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ .

ನಿ ಡಬ್ಲ್ಯೂ-9 ರಲ್ಲಿ ಕಾರ್ಮಿಕ ಅಧಿಕಾರಿ ಹಾಗೂ ಸಂಧಾನ ಅಧಿಕಾರಿಯವರು ನೀಡಿದ ವಾಸ್ತವಿಕ ವರದಿಯಲ್ಲಿ 2 ನೇ ಪಾರ್ಟಿ ಸಂಸ್ಥೆ ಯ Balance sheet ನ್ನು ನಮಗೆ ನೀಡಿದ್ದರ ಬಗ್ಗೆ ನಮೂದು ಮಾಡಲಾಗಿರುತ್ತದೆ ಎಂಬ ಸೂಚನೆಗೆ ಸಾಕ್ಷಿದಾರರು ಅಧಿಕೃತ Balance sheet ನ್ನು ನಮಗೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ . ನಾವು ಆಡಳಿತ ವರ್ಗ ಗೆ ಒಂದು ಪತ್ರವನ್ನು ನೀಡಿ 2 ಪಾರ್ಟಿಗಳಿಗೂ ಒಪ್ಪುವಂತಹ ಒಂದು ಪ್ರಸ್ತಾಪನೆಯನ್ನು ತಯಾರಿಸುವಂತೆ ಕೇಳಿಕೊಂಡಿರುತ್ತೇವೆ ಎಂದರೆ ಸರಿಯಲ್ಲ . 2 ನೇ ಪಾರ್ಟಿ ಯ ಆಡಳಿತ ವರ್ಗ ದವರು ಕೋವಿಡ್ ಅವಧಿಯನ್ನು ಹೊರತುಪಡಿಸಿ ದಿನಾಂಕ 01.04.2024 ರಿಂದ ಹೊಸದಾಗಿ 3 ವರ್ಷಗಳ ಕಾಲ ಬೇರೊಂದು ಕೈಗೆಟಕುವಂತಹ charter of demands ಬಗ್ಗೆ ಚರ್ಚೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ Claim statement ನಲ್ಲಿ 2 ನೇ ಪಾರ್ಟಿ ಸಂಸ್ಥೆ ಯು ಕಾನೂನು ಬದ್ಧವಾಗಿ ನೀಡಬೇಕಾದಂತಹ variable DA ಗಳನ್ನು ನೀಡುತ್ತಿಲ್ಲ ಎಂದು ನಮೂದಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಪ್ರಮಾಣ ಪತ್ರದಲ್ಲಿ 2 ನೇ ಪಾರ್ಟಿ ಸಂಸ್ಥೆ ಯು ರೂ. 1.25 ನ್ನು ನೀಡುತ್ತಿದ್ದು ಅದನ್ನು ರೂ. 2.50 ಗೆ ಹೆಚ್ಚಳ ಮಾಡುವಂತೆ 2 ನೇ ಪಾರ್ಟಿ ಸಂಸ್ಥೆ ಯವರ ಬಳಿ ಹೇಳಿರುತ್ತೇನೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ VDA ನ್ನು ಪ್ರಸ್ತುತ ಹಣದುಬ್ಬರವನ್ನು ಸರಿ ಹೊಂದಿಸಲು ಸರ್ಕಾರವು ಆದೇಶಿಸ್ದಿರಿಂದ 2 ನೇ ಪಾರ್ಟಿ ಸಂಸ್ಥೆ ಯು ಅದನ್ನು ಇಲ್ಲಿಯವರೆಗೂ ನೀಡಿಕೊಂಡು ಬಂದಿರುತ್ತದೆ ಎಂದರೆ ಸರಿಯಲ್ಲ . ಇಲ್ಲಿಯವರೆಗೂ 2 ನೇ ಪಾರ್ಟಿ ಸಂಸ್ಥೆ ಯು ಪ್ರತಿ ಕಾರ್ಮಿಕನಿಗೆ ಪ್ರತಿ ತಿಂಗಳು ರೂ. 1,594/- ರಂತೆ ಸರ್ಕಾರದ VDA ಆದೇಶದಂತೆ ನೀಡಿಕೊಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಅದಲ್ಲದೆ ಇಲ್ಲಿಯವರೆಗೂ 2 ನೇ ಪಾರ್ಟಿ ಸಂಸ್ಥೆ ಯು ಪ್ರತಿ ಕಾರ್ಮಿಕನಿಗೆ ಪ್ರತಿ ತಿಂಗಳು ರೂಪಾಯಿ 25 ರಿಂದ 75 ರವರೆಗೆ ಸಂಬಳದಲ್ಲಿ ಹೆಚ್ಚಳವನ್ನು ಮಾಡಿಕೊಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹಳೆಯ ಒಪ್ಪಂದದ ಪ್ರಕಾರ ಮಾಡಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ .

2 ನೇ ಪಾರ್ಟಿ ಸಂಸ್ಥೆ ಯು ಹಳೆಯ ಒಪ್ಪಂದದ ಪ್ರಕಾರ ಎಲ್ಲಾ ಸೌಲಭ್ಯಗಳನ್ನು ಕೋವಿಡ್ ಅವಧಿಯನ್ನು ಹೊರತುಪಡಿಸಿ ನೀಡಿಕೊಂಡು ಬಂದಿರುತ್ತಾರೆ ಎಂದರೆ ಸರಿ . ದಿನಾಂಕ 05.06.2023 ರ ನಮ್ಮ ಪತ್ರದಲ್ಲಿ ಆಡಳಿತ ವರ್ಗದವರಿಗೆ ಸದರಿ ವರ್ಷದ settlement ಆಗದೇ ಇದ್ದುದರಿಂದ ನಾವು ನಮ್ಮ Productive and performance ಅನ್ನು ಹೆಚ್ಚುವರಿ ಮಾಡಿರುವುದಿಲ್ಲ ಎಂದು ತಿಳಿಸಿರುತ್ತೇವೆ ಎಂದರೆ ಸರಿಯಲ್ಲ . ನಾವು ನಮ್ಮ Productive and performance ಅನ್ನು ಹೆಚ್ಚುವರಿ ಮಾಡದೇ ಇದ್ದುದರಿಂದ ನಾವು ಯಾವುದೇ ರೀತಿಯ ಹೆಚ್ಚಿನ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪಾರ್ಟಿ ಸಂಸ್ಥೆಯಲ್ಲಿ 49 1 ನೇ ಪಾರ್ಟಿಯ ಸದಸ್ಯರಿರುತ್ತಾರೆ ಎಂದರೆ ಸರಿ . ಸದರಿ ಸದಸ್ಯರಲ್ಲಿ 10%ಕಾರ್ಮಿಕರು ಬಾಯ್ಲುರ್ ಸೆಕ್ಸನ್ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಇರಬಹುದು. ಸದರಿ 10%ಕಾರ್ಮಿಕರು ಬಾಯ್ಲುರ್ ಸೆಕ್ಸನ್ ನಲ್ಲಿ ಕೆಲಸ ಮಾಡುವುದರಿಂದ 2 ನೇ ಪಾರ್ಟಿ ಸಂಸ್ಥೆಗೆ 2024 ರಿಂದ ಮಾರ್ಜಿನಲ್ ಫ್ರಾಫಿಟ್ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ 10%ಕಾರ್ಮಿಕರು ಬಾಯ್ಲುರ್ ಸೆಕ್ಸನ್ ನಲ್ಲಿ ಕೆಲಸ ಮಾಡಿ ಅದರಿಂದ ಬರುವಂತಹ ಸ್ಟೀಮ್ ಅನ್ನು ಪಕ್ಕದ ಕಾರ್ಖಾನೆಯಾದ Jubilent Pharmaceutical co. ಗೆ ಸಪ್ಲೈ ಮಾಡಿ ಅದರಲ್ಲಿ ಬರುವಂತಹ ಮಾರ್ಜಿನಲ್ ಫ್ರಾಫಿಟ್ ನ್ನು 49 ಕಾರ್ಮಿಕರಿಗೂ ನೀಡಲಾಗುತ್ತಿದೆ ಎಂದರೆ ಸರಿಯಲ್ಲ . ನಮ್ಮ Memorandum of settlement ನಲ್ಲಿ ಬೋನಸ್ ಬಗ್ಗೆ ಯೂ ಸಹ ನಮೂದಿಸಲಾಗಿರುತ್ತದೆ ಎಂದರೆ ಸರಿ . ಆ ರೀತಿ ನಮೂದಿದ್ದರೂ ಸಹ ಬೋನಸ್ ನ ಬಗ್ಗೆ ಪ್ರತ್ಯೇಕ ಎರಡು ವಿವಾದಗಳನ್ನು ಎತ್ತಿ ಅವುಗಳೂ ಕೂಡ ಈ ನ್ಯಾಯಾಧೀಕರಣ ದ ಮುಂದೆ ಇತ್ಯರ್ಥಕ್ಕೆ ಬಾಕಿ ಇರುತ್ತದೆ ಎಂದರೆ ಸರಿ . ನಾವು ಎತ್ತಿದ ಪ್ರತ್ಯೇಕ ವಿವಾದಗಳು ಕಾನೂನು ಬಾಹಿರವಾಗಿರುತ್ತವೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಬೋನಸ್ ಖಾಯಿದೆ ಅಡಿಯಲ್ಲಿ ಸದರಿ ವಿವಾದವು ಬರುವುದರಿಂದ ಹಾಗೂ ಹಳೆಯ ಒಪ್ಪಂದದಲ್ಲಿ ನಮೂದಾಗಿರುವುದರಿಂದ ವಿವಾದವನ್ನು ಎತ್ತಿರುತ್ತೇವೆ ಎಂದು ನುಡಿಯುತ್ತಾರೆ . ಬೋನಸ್ ಸಂಸ್ಥೆಯ Profit and Loss ಆಧಾರದ ಮೇಲೆ ನೀಡಲಾಗುತ್ತದೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆಯು ಆರ್ಥಿಕ ನಷ್ಟದಲ್ಲಿ ಇರುವುದರಿಂದ ಅವರು ಕಾರ್ವಿಕರಿಗೆ ನೀಡಿದಂತಹ 8.33% ಬೋನಸ್ ಸರಿಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹಿಂದಿನ ಒಪ್ಪಂದದಲ್ಲಿ 22%ವಾರ್ಷಿಕ ಬೋನಸ್ ನೀಡುವುದಾಗಿ ಒಪ್ಪಿಂದರಿಂದ ಮುಂದಿನ ಒಪ್ಪಂದದವರಗೆ ಅದು ಚಾಲ್ತಿಯಲ್ಲಿ ಇರಬೇಕಾಗುತ್ತದೆ ಎಂದು ನುಡಿಯುತ್ತಾರೆ . ಸಂಸ್ಥೆಯು ಆರ್ಥಿಕ ನಷ್ಟ ದಲ್ಲಿ ಇರಬೇಕಾರದೆ Charter of demands ಗೆ ಸಂಬಂಧಿಸಿದಂತಹ Memorandum of settlement ನ ಅನುಗುಣವಾಗಿ ನಡೆದುಕೊಂಡು ಬರುವುದು ಕಡ್ಡಾಯವಾಗಿರುವುದಿಲ್ಲ ಎಂದರೆ ಸರಿಯಲ್ಲ . ಹಣದುಬ್ಬರವನ್ನು ಸರ್ಕಾರಿ ಆದೇಶದಂತೆ VDA ಅನ್ನು 2 ನೇ ಪಾರ್ಟಿ ಸಂಸ್ಥೆಯು ನೀಡಿಕೊಂಡು ಬರುತ್ತಿರುವುದರಿಂದ Memorandum of settlement ಕಡ್ಡಾಯವಾಗಿರುವುದಿಲ್ಲ ಎಂದರೆ ಸರಿಯಲ್ಲ.

ಹಾಗಾಗಿ Charter of demands ಪ್ರಕಾರ 2 ನೇ ಪಾರ್ಟಿ ಸಂಸ್ಥೆಯು 15,000/- ಹೆಚ್ಚುವರಿ ಹಣ ಮತ್ತು ಇತರೆ ಸೌಲಭ್ಯಗಳಿಗೆ ಭಾಧ್ಯಸ್ಥರಾಗಿವುದಿಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.